# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿ 3 ಕಮರ್ಷಿಯಲ್ ನ್ಯಾಯಾಲಯಗಳನ್ನು (3 Commercial Courts) ಸ್ಥಾಪಿಸುವ ಬಗ್ಗೆ.

* * *

## ಸರ್ಕಾರಿ ಆದೇಶ ಸಂಖ್ಯೆ: ಲಾ 35 ಎಲ್‌ಸಿಇ 2018, ಬೆಂಗಳೂರು, ದಿನಾಂಕ: 31.07.2018.

**ಓದಲಾಗಿದೆ:**

ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ರವರ ಪತ್ರ ಸಂಖ್ಯೆ: GOB.II.88/2016, ದಿನಾಂಕ: 21.03.2018 ಮತ್ತು 26.06.2018.

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರಗಳಲ್ಲಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಲಾ 39 ಎಲ್‌ಸಿಇ 2016, ದಿನಾಂಕ: 21.09.2017, 08.11.2017 ಹಾಗೂ ದಿನಾಂಕ: 30.01.2018 ರಲ್ಲಿ ರಾಜ್ಯದಲ್ಲಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಗಳನ್ನು ಕಮರ್ಷಿಯಲ್ ಕೋರ್ಟ್ (Commercial Courts) ಗಳನ್ನಾಗಿ ನಿಗಧಿಗೊಳಿಸಿ ಆದೇಶಿಸಲಾಗಿದೆ. ದಿನಾಂಕ: 04.03.2018ರಂದು ನಡೆದ ಮಾನ್ಯ ಉಚ್ಚ ನ್ಯಾಯಾಲಯದ ಆಡಳಿತಾತ್ಮಕ ಸಮಿತಿ-1 ಯ ಸಭೆಯಲ್ಲಿ ಕಮರ್ಷಿಯಲ್ ಕೋರ್ಟ್ (Commercial Courts) ಗಳನ್ನು ನಿಗಧಿಗೊಳಿಸಿರುವ ಅಧಿಸೂಚನೆಯನ್ನು ಹಿಂಪಡೆದು, ಬೆಂಗಳೂರು ನಗರದಲ್ಲಿ 2 ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯಗಳನ್ನು ಹಾಗೂ ಬಳ್ಳಾರಿಯಲ್ಲಿ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಸೇರಿದಂತೆ ಒಟ್ಟು 3 ಕಮರ್ಷಿಯಲ್ ಕೋರ್ಟ್ (Commercial Courts) ಗಳನ್ನು ಸ್ಥಾಪಿಸಿ, ಸದರಿ ನ್ಯಾಯಾಲಯಗಳಿಗೆ ರಾಜ್ಯದಲ್ಲಿನ ಕಾರ್ಯವ್ಯಾಪ್ತಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ:-

| ಕ್ರ ಸಂ. | ನ್ಯಾಯಾಲಯದ ಹೆಸರು | ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳು |
|---|---|---|
| 1 | ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು | ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 2 | ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು | ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ – ಮಂಗಳೂರು, ಹಾಸನ, ಕೊಡಗು – ಮಡಿಕೇರಿ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು ಮತ್ತು ಉಡುಪಿ ಜಿಲ್ಲೆಗಳು. |
| 3 | ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಳ್ಳಾರಿ | ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ್, ದಾವಣಗೆರೆ, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ರಾಯಚೂರು, ಉತ್ತರ ಕನ್ನಡ – ಕಾರವಾರ, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗಳು. |

ಪುಟ-2ಕ್ಕೆ
ಮುಂದುವರೆದಿದೆ.

2. ಪ್ರತಿ ನ್ಯಾಯಾಲಯಗಳಿಗೆ ಪ್ರಿಸೈಡಿಂಗ್ ಅಧಿಕಾರಿ ಹಾಗೂ ಈ ಕೆಳಕಂಡಂತೆ ಅಗತ್ಯ ಪೂರಕ ಸಿಬ್ಬಂದಿಗಳೊಂದಿಗೆ 3 ಕಮರ್ಷಿಯಲ್ ಕೋರ್ಟ್ (Commercial Courts) ಗಳನ್ನು ಸ್ಥಾಪಿಸುವುದು;

| ಕ್ರ ಸಂ. | ಹುದ್ದೆಗಳ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 1 | ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು | 1 |
| 2 | ತೀರ್ಪು ಬರಹಗಾರರು | 2 |
| 3 | ಶಿರಸ್ತೇದಾರರು | 2 |
| 4 | ಪ್ರಥಮ ದರ್ಜೆ ಸಹಾಯಕರು | 2 |
| 5 | ದ್ವಿತೀಯ ದರ್ಜೆ ಸಹಾಯಕರು | 2 |
| 6 | ಬೆರಳಚ್ಚುಗಾರರು | 1 |
| 7 | ಅಟೆಂಡರ್ | 1 |
| 8 | ಪ್ಯೂನ್ | 2 |
| ಒಟ್ಟು | | 13 |

3. ಸದರಿ ಕಮರ್ಷಿಯಲ್ ಕೋರ್ಟ್ (Commercial Courts) ಗಳಿಗೆ ಅಗತ್ಯವಾಗಿರುವ ಪೀಠೋಪಕರಣಗಳ ಖರೀದಿ, ಟೈಪರೇಟರ್, ದೂರವಾಣಿ, ನೆರಳಚ್ಚು ಯಂತ್ರಗಳು, ಲೇಖನ ಸಾಮಗ್ರಿ, ಕಂಪ್ಯೂಟರ್ ಮತ್ತು ಇತ್ಯಾದಿಗಳ ಖರೀದಿಗೆ ಅನುಮತಿ ಹಾಗೂ ಸದರಿ ನ್ಯಾಯಾಲಯಗಳಿಗೆ ಅಗತ್ಯವಿರುವ ಲೇಖನ ಸಾಮಗ್ರಿ ನ್ಯಾಯಾಲಯ ಮುದ್ರೆ ಮತ್ತು ಅಗತ್ಯ ರಿಜಿಸ್ಟರ್‌ಗಳನ್ನು ಒದಗಿಸುವಂತೆ ನಿರ್ದೇಶಕರು, ಮುದ್ರಣ ಲೇಖನ ಸಾಮಗ್ರಿ ಮತ್ತು ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಅಗತ್ಯ ಸೂಚನೆ ನೀಡುವಂತೆ ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

4. ಆ ಮೇರೆಗೆ ಸರ್ಕಾರವು ಕೂಲಂಕಷವಾಗಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, "Easy of Doing Business" ನ ಅನುಷ್ಠಾನಗೊಳಿಸುವಿಕೆಯ ಕುರಿತಾಗಿ "The Commercial Courts, Commercial Division and Commercial Appellate Division of High Courts Act, 2015" ರಡಿ ದಾಖಲಾಗುವ ಪ್ರಕರಣಗಳನ್ನು ನಿರ್ವಹಿಸಲು ಬೆಂಗಳೂರಿನಲ್ಲಿ ಎರಡು ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯಗಳನ್ನು ಮತ್ತು ಬಳ್ಳಾರಿಯಲ್ಲಿ ಒಂದು ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಸೇರಿ ಒಟ್ಟು ಮೂರು ವಾಣಿಜ್ಯಾತ್ಮಕ ನ್ಯಾಯಾಲಯಗಳನ್ನು (Commercial Courts) ಸ್ಥಾಪಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ.

ಪುಟ-3ಕ್ಕೆ
ಮುಂದುವರೆದಿದೆ.

2. ಮೇಲ್ಕಂಡ 3 ಕಮರ್ಷಿಯಲ್ ಕೋರ್ಟ್ (Commercial Courts) ಗಳಿಗೆ ಅಗತ್ಯವಾಗಿರುವ ಪೀಠೋಪಕರಣಗಳ ಖರೀದಿ, ಟೈಪರೇಟರ್, ದೂರವಾಣಿ, ನೆರಳಚ್ಚು ಯಂತ್ರಗಳು, ಲೇಖನ ಸಾಮಗ್ರಿ, ಕಂಪ್ಯೂಟರ್ ಮತ್ತು ಇತ್ಯಾದಿಗಳ ಖರೀದಿಗೆ ಅನುಮತಿ ಹಾಗೂ ಸದರಿ ನ್ಯಾಯಾಲಯಗಳಿಗೆ ಅಗತ್ಯವಿರುವ ಲೇಖನ ಸಾಮಗ್ರಿ, ನ್ಯಾಯಾಲಯ ಮುದ್ರೆ ಮತ್ತು ಅಗತ್ಯ ರಿಜಿಸ್ಟರ್‌ಗಳನ್ನು ನಿರ್ದೇಶಕರು, ಮುದ್ರಣ ಲೇಖನ ಸಾಮಗ್ರಿ ಮತ್ತು ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರು ಒದಗಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

3. ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 407 ವೆಚ್ಚ-10/2018, ದಿನಾಂಕ: 24.07.2018 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಹೆಚ್. ಬಿ. ಪ್ರಫುಲ್ಲವತಿ 31/7/18
(ಹೆಚ್. ಬಿ. ಪ್ರಫುಲ್ಲವತಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-1),
ಕಾನೂನು ಇಲಾಖೆ.

ಇವರಿಗೆ:

1) ಪ್ರಧಾನ ಮಹಾಲೇಖಪಾಲರು (ಎ. ಮತ್ತು ಇ.)/(ಲೆಕ್ಕಪರಿಶೋಧನೆ-1)/(ಲೆಕ್ಕಪರಿಶೋಧನೆ-2), ಕರ್ನಾಟಕ, ಬೆಂಗಳೂರು-1
2) ರಿಜಿಸ್ಟ್ರಾರ್ ಜನರಲ್ ರವರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು-1
3) ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು
4) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ ಜಿಲ್ಲೆ, ಬಳ್ಳಾರಿ
5) ಎಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರುಗಳು
6) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
7) ಮಾನ್ಯ ಕಾನೂನು, ಸಂಸದೀಯ ವ್ಯವಹಾರ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಕಾಸ ಸೌಧ, ಬೆಂಗಳೂರು-1
8) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ಕಾನೂನು ಇಲಾಖೆ, ವಿಧಾನ ಸೌಧ, ಬೆಂಗಳೂರು-1
9) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-2 ಮತ್ತು 10), ವಿಧಾನ ಸೌಧ, ಬೆಂಗಳೂರು-1
10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.